**1 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಟಿ.ನರಸೀಪುರ**

**ಸಿ.ಸಿ ಸಂಖ್ಯೆ : 1998/2025**

**ಫಿರ್ಯಾದಿದಾರರು** : ಜಯಶಂಕರ.ಎಸ್

**ವಿರುದ್ಧ**

**ಆರೋಪಿ** : ಎಂ.ಎನ್.ವಿನೋದ್ ಕುಮಾರ್

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರನ್ವಯ ಆರೋಪಿಯ  ಹೇಳಿಕೆ

ಪ್ರಶ್ನೆ:1: ಈ ಮೊಕದ್ದಮೆಯಲ್ಲಿ ವಿಚಾರಣೆ ಆಗಿರುವ ಸಾಕ್ಷಿದಾರರ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

**ಉಃ**

ಪ್ರಶ್ನೆ:2: ಫ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಹೋಲ್ ಸೇಲ್ ಅಂಗಡಿಯ ವ್ಯಾಪಾರಕ್ಕಾಗಿ, ಪಿರ್ಯಾದುದಾರರಿಂದ ದಿಃ 26/12/2024 ರಂದು ರೂ.2,00,000/- ಗಳನ್ನು ಸಾಲವಾಗಿ ಪಡೆದಿದ್ದು, ನಂತರ ಕೊಟಾಕ್ ಮಹೀಂದರ ಬ್ಯಾಂಕ್, ತಿ.ನರಸೀಪುರ ಶಾಖೆ, ಚೆಕ್ ಸಂಖ್ಯೆ 000008 ರೂ.2,00,000/- ದಿಃ 24/02/2025 ಗಳನ್ನು ನಮೂದಿಸಿ ಅವರಿಗೆ ನೀಡಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

**ಉಃ**

ಪ್ರ:**3:** ಫ್ರಾಸಾ-**1** ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ಅವರು ಸದರಿ ಚೆಕ್ಕನ್ನು ಕೆನರಾ ಬ್ಯಾಂಕ್, ತಿ.ನರಸೀಪುರ ಶಾಖೆಗೆ ನಗಧೀಕರಣಕ್ಕಾಗಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ಖಾತೆಯಲ್ಲಿ " **Funds Insufficient "  ಎಂದು**  ದಿಃ 10/03/2025 ರಂದು ಸದರಿ ಚೆಕ್ಕು ವಾಪಸ್ಸು ಬಂದಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

**ಉಃ**

ಪ್ರ:**4:** ಫ್ರಾಸಾ-**1** ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ, ನಂತರ ಪಿರ್ಯಾದುದಾರರು ಸದರೀ ವಿಷಯವನ್ನು ತಿಳಿಸಿದಾಗ, ಆರೋಪಿಯಾದ ನೀವು ಮತ್ತೆ

ಕಾಲಾವಕಾಶ ಕೋರಿದ್ದು, ಅವರು ಸದರಿ ಚೆಕ್ಕನ್ನು ಕೆನರಾ ಬ್ಯಾಂಕ್, ತಿ.ನರಸೀಪುರ ಶಾಖೆಗೆ ನಗಧೀಕರಣಕ್ಕಾಗಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ಖಾತೆಯಲ್ಲಿ " **Funds Insufficient "** **ಎಂದು** ದಿಃ 28/03/2025 ರಂದು ಸದರಿ ಚೆಕ್ಕು ವಾಪಸ್ಸು ಬಂದಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

**ಉಃ**

**ಪ್ರಶ್ನೆ:**5: ಫಿರ್ಯಾದಿ-1 ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ನಂತರ ದಿಃ 24/04/2025 ರಂದು ನಿನಗೆ ವಕೀಲರ ಮುಖಾಂತರ ನೋಟೀಸು ಕಳಿಸಿ ಸಾಲದ ಹಣವನ್ನು ಮರುಪಾವತಿ ಮಾಡಬೇಕೆಂದು ಕೇಳಿದ್ದು, ಆದರೆ, ನೀನು ಇದುವರೆಗೂ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎನ್ನುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

**ಉಃ**

**ಪ್ರಶ್ನೆಃ 6** : ನೀವು ಈ ಪ್ರಕರಣದಲ್ಲಿ ಏನಾದರೂ ಹೇಳುವುದಿದೆಯೇ ?

**ಉಃ**

**ಪ್ರಶ್ನೆಃ 7** : ನೀವು ನಿಮ್ಮ ಪರವಾದ ಯಾವುದಾದರೂ ಸಾಕ್ಷ್ಯವನ್ನು ಮತ್ತು ದಾಖಲೆಗಳನ್ನು ಹಾಜರುಪಡಿಸುತ್ತೀರಾ?

**ಉತ್ತರಃ**

ನನ್ನ ಸಮಕ್ಷಮದಲ್ಲಿ ಆರೋಪಿತನ ವಿಚಾರಣೆಯನ್ನು ನಡೆಸಿದ್ದು, ಆರೋಪಿತನು ನೀಡಿದ ಉತ್ತರವನ್ನು ಯಥಾವತ್ತಾಗಿ ಮತ್ತು ಸಂಪೂರ್ಣವಾಗಿ ದಾಖಲು ಮಾಡಿಕೊಂಡಿದ್ದೇನೆಂದು ಈ ಮೂಲಕ ದೃಢಪಡಿಸುತ್ತೇನೆ.

ದಿನಾಂಕಃ 04/12/2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು., ಟಿ.ನರಸೀಪುರ.**